KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited 'A' Grade 2014

website: kud.ac.in

No. KU/Aca(S&T)/RPH-389/2020-21/ 57 Date: 13 NOV 2020

## ಸುತ್ತೋಲೆ

ವಿಷಯ: ಕೋವಿಡ್–19 ಹಿನ್ನೆಲೆಯಲ್ಲಿ 2020–21ನೇ ಸಾಲಿಗೆ ಸ್ನಾತಕ / ಸ್ನಾತಕೋತ್ತರ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಪ್ರಮಾಣಿತ ಕಾರ್ಯಾಚರಣಾ ವಿಧಾನ / ಮಾರ್ಗಸೂಚಿ (Standard Operating Procedure) ಕುರಿತು ವಿದ್ಯಾರ್ಥಿಗಳ / ಪೋಷಕರ ಗಮನಕ್ಕೆ.

ಉಲ್ಲೇಖ:
1. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು–1) ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು ಇವರ ಪತ್ರ ಸಂ. ಇಡಿ 334 ಯುಎನ್ಇ 2020, ದಿನಾಂಕ 09.11.2020.
2. ಕಚೇರಿ ಪತ್ರ ಸಂ.KU/Aca(S&T)/RPH-389/2020-21/53, ದಿ. 11.11.2020.
3. ಮಾನ್ಯ ಕುಲಪತಿಗಳ ಆದೇಶ ದಿನಾಂಕ 13 NOV 2020

-----

ಉಲ್ಲೇಖಿತ 02ರ ಸುತ್ತೋಲೆಯನ್ನು ಮುಂದುವರೆಸುತ್ತಾ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ಮತ್ತು ಕ.ವಿ.ವಿ. ಎಲ್ಲ ಸ್ನಾತಕೋತ್ತರ ವಿಭಾಗಗಳ / ಕ.ವಿ.ವಿ. ಸ್ನಾತಕೋತ್ತರ ಕೇಂದ್ರಗಳ / ಅಧ್ಯಕ್ಷರು / ಆಡಳಿತಾಧಿಕಾರಿ / ಸಂಯೋಜಕರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಮಾರ್ಗಸೂಚಿಗಳನ್ನು ವಿದ್ಯಾರ್ಥಿಗಳು ಮತ್ತು ಪೋಷಕರು ಗಮನಕ್ಕೆ ವಿವಿಧ ಸಂಪರ್ಕ ಮಾಧ್ಯಮಗಳ ಮುಖಾಂತರ ತರಲು ಅಗತ್ಯ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ಮುಂದುವರೆದು, ಇದರೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ಅಗತ್ಯ ಮಾಹಿತಿ ಸಂಗ್ರಹಿಸಿ ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯಕ್ಕೆ ಒದಗಿಸಬೇಕೆಂದು ಸಹ ತಿಳಿಯಪಡಿಸಿದೆ. ಹಾಗೆಯೇ ಇದರೊಂದಿಗೆ, ಭೌತಿಕ ತರಗತಿಗಳಿಗೆ ಹಾಜರಾಗಲು ವಿದ್ಯಾರ್ಥಿಗಳನ್ನು ಕಳುಹಿಸುವ ಬಗ್ಗೆ ಪೋಷಕರು ನೀಡುವ ಒಪ್ಪಿಗೆ ಪತ್ರದ ಮಾದರಿ ನಮೂನೆಯನ್ನು ಇರಿಸಿದ್ದು, ಈ ನಮೂನೆಯಲ್ಲಿ ಪೋಷಕರ ಒಪ್ಪಿಗೆಯನ್ನು ಸಂಗ್ರಹಿಸಬಹುದಾಗಿರುತ್ತದೆ ಎಂದು ತಿಳಿಸಿದೆ.

Sd/- 13/11/2020

(ಡಾ. ಹನುಮಂತಪ್ಪ ಕೆ.ಟಿ)
ಕುಲಸಚಿವರು

ಗೆ,
ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು, ಮುಖ್ಯಸ್ಥರು, ಕ.ವಿ.ವಿ. ಸ್ನಾತಕೋತ್ತರ ವಿಭಾಗ ಹಾಗೂ ಕ.ವಿ.ವಿ. ಸ್ನಾತಕೋತ್ತರ ಕೇಂದ್ರಗಳಾದ ಗದಗ, ಹಾವೇರಿ, ಕಾರವಾರ.

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ:**
1. ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ., ಧಾರವಾಡ.
2. ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ., ಧಾರವಾಡ.
3. ನಿರ್ದೇಶಕರು, ಸಿಡಿಸಿ ವಿಭಾಗ, ಕ.ವಿ.ವಿ., ಧಾರವಾಡ.
4. ಸ್ಥಾನಿಕ ಅಭಿಯಂತರರು, ಕಟ್ಟಡ ವಿಭಾಗ, ಕ.ವಿ.ವಿ., ಧಾರವಾಡ.
5. ಮುಖ್ಯ ವೈದ್ಯಾಧಿಕಾರಿಗಳು, ಆರೋಗ್ಯ ಕೇಂದ್ರ, ಕ.ವಿ.ವಿ. ಆವರಣ ಹಾಗೂ ಕೆ.ಸಿ.ಡಿ. ಆವರಣ, ಧಾರವಾಡ.
6. ಡಾ. ಎ.ಬಿ.ವೇದಮೂರ್ತಿ, ನೋಡಲ್ ಅಧಿಕಾರಿಗಳು, ಕೋವಿಡ್–19 ಘಟಕ, ಕ.ವಿ.ವಿ. ಧಾರವಾಡ.
7. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ., ಧಾರವಾಡ., ಮುಂದುವರೆದು, ಕವಿವಿ ವೆಬ್‌ಸೈಟ್‌ನಲ್ಲಿ ಅಳವಡಿಸುವುದು
8. ಕುಲಪತಿಗಳ ಆಪ್ತ ಕಾರ್ಯದರ್ಶಿ, ಕ.ವಿ.ವಿ., ಧಾರವಾಡ.
9. ಕುಲಸಚಿವರ ಆಪ್ತ ಕಾರ್ಯದರ್ಶಿ, ಕ.ವಿ.ವಿ., ಧಾರವಾಡ.
10. ಸಹಾಯಕ ಕುಲಸಚಿವರು, ಸಾಮಾನ್ಯ ಆಡಳಿತ (ಜಿಎಡಿ) ವಿಭಾಗ, ಕ.ವಿ.ವಿ. ಧಾರವಾಡ ಇವರ ಮುಂದಿನ ಅಗತ್ಯ ಕ್ರಮಕ್ಕಾಗಿ

## ವಿದ್ಯಾರ್ಥಿ ಮತ್ತು ಪೋಷಕರ ಗಮನಕ್ಕಾಗಿ ಮಾರ್ಗಸೂಚಿಗಳು

1. ದಿನಾಂಕ 17.11.2020ರಿಂದ ಎಲ್ಲ ಸ್ನಾತಕೋತ್ತರ ಮತ್ತು ಸ್ನಾತಕ ಪದವಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಮಾತ್ರ ಭೌತಿಕ ತರಗತಿಗಳು (Offline Classes) ಪ್ರಾರಂಭವಾಗಲಿರುತ್ತವೆ. ಪದವಿ ತರಗತಿಗಳ ಇತರೆ ವರ್ಷಗಳ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳು ನಡೆಯಲಿರುತ್ತವೆ.
2. ಸ್ನಾತಕೋತ್ತರ ಮತ್ತು ಸ್ನಾತಕ ಪದವಿ ಅಂತಿಮ ವರ್ಷದ ವಿದ್ಯಾರ್ಥಿಗಳು ಭೌತಿಕ ತರಗತಿಗಳಿಗೆ ಹಾಜರಾಗಲು ಇಚ್ಛಿಸದಿದ್ದಲ್ಲಿ ಅಂಥಹ ವಿದ್ಯಾರ್ಥಿಗಳು ಆನ್‌ಲೈನ್ ಕ್ಲಾಸ್‌ಗಳಿಗೆ ಹಾಜರಾಗಬಹುದಾಗಿರುತ್ತದೆ.
3. ಆನ್‌ಲೈನ್ ತರಗತಿಗಳಿಗೆ ಹಾಜರಾಗ ಬಯಸುವ ವಿದ್ಯಾರ್ಥಿಗಳು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು / ಪ್ರಾಂಶುಪಾಲರುಗಳನ್ನು ಸಂಪರ್ಕಿಸಿ ತರಗತಿಗಳ ಬಗ್ಗೆ ಹಾಗೂ ಇತರೆ ವಿವರಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಬಹುದಾಗಿರುತ್ತದೆ.
4. ಆನ್‌ಲೈನ್ ತರಗತಿಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿರಬಹುದಾದ ಪಠ್ಯಕ್ರಮದ ಬಗೆಗಿನ ಸಂದೇಹಗಳನ್ನು ನಿವಾರಿಸುವ ಸಲುವಾಗಿ ಸಂಪರ್ಕ ತರಗತಿಗಳನ್ನು (Contact Classes) ಏರ್ಪಡಿಸಲಾಗುತ್ತಿದ್ದು, ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರಿಂದ / ಪ್ರಾಚಾರ್ಯರಿಂದ ವೇಳಾಪಟ್ಟಿ ವಿವರಗಳನ್ನು ಪಡೆದುಕೊಳ್ಳಬಹುದಾಗಿರುತ್ತದೆ.
5. ಭೌತಿಕ ತರಗತಿಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ತರಗತಿಗಳಿಗೆ ಬರುವ ಹಿಂದಿನ ಮೂರು ದಿನಗಳಲ್ಲಿ ಕೋವಿಡ್-19 ಸೋಂಕು ಇಲ್ಲದಿರುವ ಬಗ್ಗೆ ಆರೋಗ್ಯ ಇಲಾಖೆ ನೀಡಿದ ಪ್ರಮಾಣ ಪತ್ರ ಮತ್ತು ವಿದ್ಯಾರ್ಥಿಯು ತರಗತಿಗಳಿಗೆ ಹಾಜರಾಗಲು ಪೋಷಕರು ನೀಡಿದ ಒಪ್ಪಿಗೆ ಪತ್ರಗಳನ್ನು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರುಗಳಿಗೆ/ ಪ್ರಾಚಾರ್ಯರಿಗೆ ಸಲ್ಲಿಸಬೇಕಾಗಿರುತ್ತದೆ. ಒಪ್ಪಿಗೆ ಪತ್ರದ ನಮೂನೆಯು ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ (website – kud.ac.in) ಲಭ್ಯವಿರುತ್ತದೆ.
6. ಭೌತಿಕ ತರಗತಿಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಗುರುತಿನ ಚೀಟಿ ಹೊಂದಿರಬೇಕಾಗಿರುತ್ತದೆ.
7. ವಿಶ್ವವಿದ್ಯಾಲಯ/ಮಹಾವಿದ್ಯಾಲಯಗಳ ಕಾಲೇಜುಗಳ ಆವರಣದಲ್ಲಿರುವ ಉಪಹಾರ ಗೃಹಗಳನ್ನು ಮುಚ್ಚಬೇಕೆಂದಿರುವುದರಿಂದ ಪ್ರತಿ ವಿದ್ಯಾರ್ಥಿಯು ಅವಶ್ಯವಿರುವ ನೀರು ಮತ್ತು ಉಪಹಾರವನ್ನು ತಾವೇ ಸ್ವತಃ ವ್ಯವಸ್ಥೆ ಮಾಡಿಕೊಳ್ಳಬೇಕಾಗಿರುತ್ತದೆ.
8. ವಿಭಾಗ / ಮಹಾವಿದ್ಯಾಲಯಗಳ ಪ್ರವೇಶ ದ್ವಾರಗಳಲ್ಲಿ ಥರ್ಮಲ್ ಸ್ಕ್ಯಾನರ್ ಮತ್ತು ಸ್ಯಾನಿಟೈಜರ್‌ಗಳ ವ್ಯವಸ್ಥೆಗಳನ್ನು ಮಾಡಿರುವುದರಿಂದ ಥರ್ಮಲ್ ಸ್ಕ್ಯಾನಿಂಗ್ ಮತ್ತು ಸ್ಯಾನಿಟೈಜರ್ ಮಾಡಿಕೊಂಡು ಕಟ್ಟಡವನ್ನು ಪ್ರವೇಶಿಸಬೇಕಾಗಿರುತ್ತದೆ.
9. ಕೋವಿಡ್ – 19 ಸೋಂಕು ಇದ್ದವರು ಭೌತಿಕ ತರಗತಿಗಳಿಗೆ ಹಾಜರಾಗಲು ಅನುಮತಿ ಇರುವುದಿಲ್ಲ. ಅಂತಹ ವಿದ್ಯಾರ್ಥಿಗಳು ಆನ್‌ಲೈನ್ ತರಗತಿಗಳಿಗೆ ಹಾಜರಾಗಬಹುದಾಗಿರುತ್ತದೆ.
10. ಭೌತಿಕ ತರಗತಿಗಳಿಗೆ ಹಾಜರಾಗುವ ಎಲ್ಲ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಕಡ್ಡಾಯವಾಗಿ ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕಾಗಿರುತ್ತದೆ.

ಪು.ತಿ.ನೋ.

11. ಕೋವಿಡ್–19 ಸೋಂಕಿನ ಲಕ್ಷಣಗಳು ವಿದ್ಯಾರ್ಥಿಗಳಲ್ಲಿ ಇರುವುದು ಕಂಡು ಬಂದಲ್ಲಿ ಕೂಡಲೇ ಮುಖ್ಯಸ್ಥರು / ಪ್ರಾಚಾರ್ಯರಿಗೆ ತಿಳಿಸತಕ್ಕದ್ದು. ಸೋಂಕಿನ ಪರೀಕ್ಷೆಗಾಗಿ ಮುಖ್ಯಸ್ಥರು/ಪ್ರಾಚಾರ್ಯರು ಸೂಕ್ತ ವ್ಯವಸ್ಥೆ ಮಾಡಬೇಕೆಂದು ನಿರ್ದೇಶಿಸಲಾಗಿರುತ್ತದೆ. ಪರೀಕ್ಷಾ ವರದಿ ಬರುವವರೆಗೆ ಸೋಂಕಿನ ಲಕ್ಷಣ ಇರುವವರನ್ನು ಪ್ರತ್ಯೇಕವಾಗಿರಿಸಲು ವಿಭಾಗ/ಕಾಲೇಜುಗಳಲ್ಲಿ ಸೂಕ್ತ ವ್ಯವಸ್ಥೆ ಮಾಡಲಾಗಿರುತ್ತದೆ. ಸೋಂಕು ಖಚಿತವಾದ ಸಂದರ್ಭಗಳಲ್ಲಿ ಈ ಬಗ್ಗೆ ಪೋಷಕರಿಗೆ ಕೂಡಲೇ ಮಾಹಿತಿ ನೀಡಲಿದ್ದು, ಪೋಷಕರು ಮುಂದಿನ ಚಿಕಿತ್ಸೆಗೆ ವ್ಯವಸ್ಥೆ ಮಾಡಿಕೊಳ್ಳಬೇಕಾಗಿರುತ್ತದೆ.
12. ವಿದ್ಯಾರ್ಥಿಗಳು ವಿಶ್ವವಿದ್ಯಾಲಯ / ಕಾಲೇಜುಗಳಿಗೆ ಭೌತಿಕ ತರಗತಿಗೆ ಹಾಜರಾಗುವ ಮುಂಚೆಯೇ ಹಾಸ್ಟೆಲಗಳನ್ನು ಹಾಗೂ ಇನ್ನಿತರ ಕಟ್ಟಡಗಳನ್ನು ಸ್ಯಾನಿಟೈಜರ್ ಮಾಡಿ ನಂತರ ಆಗಿಂದಾಗ್ಗೆ ಪುನಃ ಸ್ಯಾನಿಟೈಜರ್ ಮಾಡಲು ವ್ಯವಸ್ಥೆ ಮಾಡಿಕೊಳ್ಳಲಾಗಿರುತ್ತದೆ.
13. ಪ್ರತಿದಿನ ತರಗತಿಗಳ ಕೊಠಡಿಯಲ್ಲಿರುವ ಪಿಠೋಪಕರಣಗಳನ್ನು ಸ್ಯಾನಿಟೈಜ್ ಮಾಡಲು ಯೋಜಿಸಲಾಗಿರುತ್ತದೆ.
14. ವಿದ್ಯಾರ್ಥಿಗಳಲ್ಲಿ / ಸಿಬ್ಬಂದಿಗಳಲ್ಲಿ ಸೋಂಕಿನ ಲಕ್ಷಣಗಳು ಇರುವ ಬಗ್ಗೆ ಸದಾ ನಿಗಾ ಇರಿಸಿ ಲಕ್ಷಣಗಳು ಕಂಡು ಬಂದಲ್ಲಿ ಕೂಡಲೇ ಪರೀಕ್ಷೆಗೊಳಪಡಿಸಲು ಯೋಜಿಸಲಾಗಿರುತ್ತದೆ.
15. ಹಾಸ್ಟೇಲ್‌ಗಳಲ್ಲಿ ಒಂದು ಕೊಠಡಿಯಲ್ಲಿ ಒಬ್ಬರನ್ನು ಮಾತ್ರ ಇರಿಸಲು ಯೋಜಿಸಲಾಗಿದ್ದು, ಹಾಸ್ಟೆಲ್ ಕಟ್ಟಡ, ಅಡುಗೆ ಕೋಣೆಗಳಲ್ಲಿ ಎಲ್ಲ ಮುಂಜಾಗ್ರತ ಕ್ರಮ ಕೈಗೊಳ್ಳಲು ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಹಾಸ್ಟೆಲ್‌ಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗಾಗಿ ಸಂಬಂಧಿಸಿದ ನಿಲಯಪಾಲಕರುಗಳನ್ನು / ಮುಖ್ಯಸ್ಥರುಗಳನ್ನು ಸಂಪರ್ಕಿಸಬಹುದಾಗಿರುತ್ತದೆ.
16. ಪಿ.ಜಿ. ಸೆಂಟರಗಳ ಆಡಳಿತಾಧಿಕಾರಿಗಳು/ಅಧೀನ ಮತ್ತು ಸಂಲಗ್ನ ಕಾಲೇಜುಗಳ ಪ್ರಾಚಾರ್ಯರುಗಳು ಕಾಲೇಜು ಮಟ್ಟದಲ್ಲಿ ಪ್ರತ್ಯೇಕವಾಗಿ ಸ್ಥಳೀಯ ವ್ಯವಸ್ಥೆಗಳನ್ನು ಮಾಡಿಕೊಂಡಿರುವುದರಿಂದ ಹೆಚ್ಚಿನ ಮಾಹಿತಿಗಾಗಿ ವಿದ್ಯಾರ್ಥಿಗಳು ಸಂಬಂಧಪಟ್ಟ ಮಹಾವಿದ್ಯಾಲಯಗಳ ಪ್ರಾಂಶುಪಾಲರು / ಮುಖ್ಯಸ್ಥರುಗಳನ್ನು ಸಂಪರ್ಕಿಸಬಹುದಾಗಿರುತ್ತದೆ.
17. ತರಗತಿಗಳ ಪ್ರಾರಂಭದ ಬಗೆಗಿನ ಸರ್ಕಾರಿ ಆದೇಶ, S.O.P. ಮತ್ತು ಸುತ್ತೋಲೆಗಳನ್ನು ವಿಶ್ವವಿದ್ಯಾಲಯದ ವೈಬ್‌ಸೈಟಗಳಲ್ಲಿ ಪ್ರಕಟಿಸಿದ್ದು ಹೆಚ್ಚಿನ ಮಾಹಿತಿಗಾಗಿ ನಿಂ ಋಮಿತವಾಗಿ ವಿಶ್ವವಿದ್ಯಾಲಯದ ವೈಬ್‌ಸೈಟನ್ನು ಸಂಪರ್ಕಿಸಬಹುದಾಗಿರುತ್ತದೆ (website – kud.ac.in).

**(ಡಾ. ಹನುಮಂತಪ್ಪ ಕೆ.ಟಿ)**
**ಕುಲಸಚಿವರು**

## ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಸ್ನಾತಕೋತ್ತರ ಹಾಗೂ ಸ್ನಾತಕ ಅಂತಿಮ ವರ್ಷದ ಪದವಿಗೆ ಭೌತಿಕ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಕೋವಿಡ್-19ಕ್ಕೆ ಸಂಬಂಧಿಸಿದ ಆರೋಗ್ಯದ ಮಾಹಿತಿ ಸಿದ್ಧಪಡಿಸಿಟ್ಟುಕೊಳ್ಳಬೇಕಾದ ಬಗ್ಗೆ.

**ಮಹಾವಿದ್ಯಾಲಯ / ವಿಭಾಗದ ಹೆಸರು:** **ಸ್ಥಳ:**

### ಭಾಗ-1: ಭೌತಿಕ ತರಗತಿಗಳಿಗೆ ಹಾಜರಾದ ಬಗ್ಗೆ ಮಾಹಿತಿ

| ಕ್ರ.ಸಂ. | ಮಾಹಿತಿ | ಸಂಖ್ಯೆ |
|---|---|---|
| 1 | ಪ್ರತಿ ಕೋರ್ಸಗೆ ನೊಂದಣಿಯಾದ ವಿದ್ಯಾರ್ಥಿಗಳ ಸಂಖ್ಯೆ: | |
| 2 | ಭೌತಿಕ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ: | |
| 3 | ಆನ್‌ಲೈನ್ ತರಗತಿಗಳಿಗೆ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳ ಸಂಖ್ಯೆ: | |
| 4 | ಪಾಲಕರಿಂದ ಒಪ್ಪಿಗೆ ಪಡೆದು ಭೌತಿಕ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ: | |
| 5 | ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಅವಶ್ಯವಿದ್ದು ಸ್ಥಳದ ಅಭಾವವಿದ್ದಲ್ಲಿ ಭೌತಿಕ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳನ್ನು ಶೇಕಡಾ 50 ರಂತೆ ವಿಭಾಗಿಸಿ ತರಗತಿಗಳನ್ನು ತೆಗೆದುಕೊಂಡಿರುವ ಮಾಹಿತಿ: | |
| 6 | ಭೌತಿಕ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳು ವಸತಿನಿಲಯದಲ್ಲಿ ವಾಸಿಸುವವರ ಸಂಖ್ಯೆ: | |

### ಭಾಗ-2: ಭೌತಿಕ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ಮಾಹಿತಿ

| ಕ್ರ.ಸಂ. | ಮಾಹಿತಿ | ಸಂಖ್ಯೆ |
|---|---|---|
| 1 | ಕೋವಿಡ್-19 ಪರೀಕ್ಷೆ ಮಾಡಿಕೊಂಡು ಬಂದ ವಿದ್ಯಾರ್ಥಿಗಳ ಸಂಖ್ಯೆ: | |
| 2 | ಕೋವಿಡ್-19 ಪರೀಕ್ಷೆಯನ್ನು ಸ್ಥಳೀಯವಾಗಿ ತಕ್ಷಣ ಮಾಡಿಸಿಕೊಂಡ ವಿದ್ಯಾರ್ಥಿಗಳ ಸಂಖ್ಯೆ: | |
| 3 | ಕೋವಿಡ್-19 ಪರೀಕ್ಷೆಯಲ್ಲಿ ಸೊಂಕು (Positive) ದೃಢಪಟ್ಟಿರುವ ವಿದ್ಯಾರ್ಥಿಗಳ ಸಂಖ್ಯೆ: | |
| 4 | ಕೋವಿಡ್-19 ಪರೀಕ್ಷೆಯಲ್ಲಿ ಸೊಂಕು (Negative) ಇಲ್ಲದಿರುವ ವಿದ್ಯಾರ್ಥಿಗಳ ಸಂಖ್ಯೆ: | |
| 5 | ತರಗತಿಗಳು ಪ್ರಾರಂಭವಾದ ನಂತರ ಕೋವಿಡ್-19 ಪರೀಕ್ಷೆಯಲ್ಲಿ ಸೊಂಕು (Positive) ದೃಢಪಟ್ಟಿರುವ ವಿದ್ಯಾರ್ಥಿಗಳ ಸಂಖ್ಯೆ: | |
| 6 | ತರಗತಿಗಳು ಪ್ರಾರಂಭವಾದ ನಂತರ ಕೋವಿಡ್-19 ಪರೀಕ್ಷೆಯಲ್ಲಿ ಸೊಂಕು (Positive) ದೃಢಪಟ್ಟಿರುವ ಬೋಧಕರ ಸಂಖ್ಯೆ: | |
| 7 | ತರಗತಿಗಳು ಪ್ರಾರಂಭವಾದ ನಂತರ ಕೋವಿಡ್- 19 ಪರೀಕ್ಷೆಯಲ್ಲಿ ಸೊಂಕು (Positive) ದೃಢಪಟ್ಟಿರುವ ಬೋಧಕೇತರ ಸಂಖ್ಯೆ: | |
| 8 | ಕೋವಿಡ್-19 ಸೊಂಕು ದೃಢಪಟ್ಟ ವಿದ್ಯಾರ್ಥಿಗಳಿಗೆ ಸ್ಥಳೀಯವಾಗಿ ಚಿಕಿತ್ಸೆ ನೀಡಿರುವ ಸಂಖ್ಯೆ: | |
| 9 | ಕೋವಿಡ್-19 ಸೊಂಕು ದೃಢಪಟ್ಟ ವಿದ್ಯಾರ್ಥಿಗಳನ್ನು ಮರಳಿ ಪಾಲಕರ ವಾಸಸ್ಥಾನಕ್ಕೆ ಮರಳಿ ಕಳುಹಿಸಿರುವ ಸಂಖ್ಯೆ: | |

### ಭಾಗ-3: ಸಂಪರ್ಕ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳ ಮಾಹಿತಿ

| ಕ್ರ.ಸಂ. | ಮಾಹಿತಿ | ಸಂಖ್ಯೆ |
|---|---|---|
| 1 | ಆನ್‌ಲೈನ್ ತರಗತಿಗಳಿಗೆ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳ ಸಂಖ್ಯೆ: | |
| 2 | ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ಆಯ್ಕೆ ಮಾಡಿಕೊಂಡು ನಿಯಮಾವಳಿಗಳ ಪ್ರಕಾರ ಸಂಪರ್ಕ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ: | |
| 3 | ಸಂಪರ್ಕ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳಿಗೆ ಪಠ್ಯಕ್ರಮದ ಅಧ್ಯಯನ ಸಾಮಗ್ರಿಗಳನ್ನು ಒದಗಿಸಿದ್ದರೆ ವಿವರ:<br>ಅ)<br>ಆ)<br>ಇ) | |

## ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

### ವಿಶ್ವವಿದ್ಯಾಲಯ /ಕಾಲೇಜುಗಳಲ್ಲಿ ನಡೆಸುವ ಭೌತಿಕ ತರಗತಿಗಳಿಗೆ ಹಾಜರಾಗಲು ವಿದ್ಯಾರ್ಥಿಗಳನ್ನು ಕಳುಹಿಸುವ ಬಗ್ಗೆ ಪೋಷಕರು ನೀಡುವ ಒಪ್ಪಿಗೆ ಪತ್ರ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾಲಯದ ____________________ ವಿಭಾಗ / ಕಾಲೇಜಿನಲ್ಲಿ ____________________ ಕೋರ್ಸಿನಲ್ಲಿ ವ್ಯಾಸಂಗ ಮಾಡುತ್ತಿರುವ ಶ್ರೀ / ಶ್ರೀಮತಿ ______________________________ ಎಂಬುವವರ ತಂದೆ / ತಾಯಿ / ಪೋಷಕರಾದ ಶ್ರೀ / ಶ್ರೀಮತಿ ______________________________ ಎಂಬ ನಾನು ತಿಳಿಯಪಡಿಸುವುದೇನೆಂದರೆ ನನ್ನ ಮಗ/ಮಗಳು ಭೌತಿಕ ತರಗತಿಗಳಿಗೆ ಹಾಜರಾಗಲು ಮನೋಸ್ಥೈರ್ಯ ಹೊಂದಿದ್ದು ತರಗತಿಗಳಿಗೆ ಹಾಜರಾಗಲು ಇಚ್ಛಿಸಿದ್ದಾನೆ / ಳೆ. ಇದಕ್ಕೆ ನನ್ನ ಸಂಪೂರ್ಣ ಸಮ್ಮತಿ ಇರುತ್ತದೆಂದು ಈ ಮೂಲಕ ಒಪ್ಪಿಗೆ ಪತ್ರ ನೀಡುತ್ತಿದ್ದೇನೆ.

ದಿನಾಂಕ: ____________________

ಸ್ಥಳ : ____________________

ಸಹಿ : ____________________

ಹೆಸರು : ____________________

ವಿಳಾಸ : ____________________

____________________

____________________

____________________

ಮೊ. ಸಂಖ್ಯೆ : ____________________